Reg No B-G 155 24-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಅರಮನೆ ಸರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಶಿವಸೇನೆ ಬಗ್ಗೆ ಎಂಪಿಸಿಸಿ ಕರೆ ❁ ಇಎಂಎಸ್ ಒತ್ತಾಯ

ಜನಸಂಘ ಅಧಿವೇಶನ

ಬೊಂಬಾಯಿನಲ್ಲಿ ಬರುವ ಏಪ್ರಿಲ್ ನಲ್ಲಿ ಜನಸಂಘ ಅಧಿವೇಶನ ಸಮಾವೇಶವಾಗುವದು. ಎರಡನೇ ಬಾರಿಗೆ ಆಯ್ಕೆಯಾಗಿರುವ ಶ್ರೀ ಎ. ಬಿ. ವಾಜಪೇಯಿ ಅಧ್ಯಕ್ಷತೆ ಸ್ವೀಕರಿಸುವರು.

★

ಖೋಟಾ ನೋಟುಗಳು

ಪಂಜಾಬಿನ ಫಿರೋಜಪುರದಲ್ಲಿ ರೂ. 100 ರ ಖೋಟಾ ನೋಟು ಹೆಚ್ಚಿ ಜನರಿಗೆ ಆತಂಕವಾಗಿದೆ.

●

ದಕ್ಷತೆಯ ಬಗ್ಗೆ ಚರ್ಚೆ

ಸರ್ಕಾರಿ ಕಚೇರಿಯಲ್ಲಿ ದಿನಕ್ಕೆ 3 ಘಂಟೆಗಳಿಗಿಂತ ಹೆಚ್ಚು ಕಾಲ ದಕ್ಷತೆಯಿಂದ ಯಾರೂ ಕೆಲಸ ಮಾಡುವದಿಲ್ಲ ಎಂಬು ಆರ್ಥಿಕ ಮಂತ್ರಿ ಶ್ರೀ ಬಿ. ರಾಮಕೃಷ್ಣ ಹೆಗ್ಡೆಯವರು ವಿಧಾನ ಪರಿಷತ್‌ನಲ್ಲಿ ತಿಳಿಸಿದರು.

★

ಮಂತ್ರಿಗಳ ಆಶ್ವಾಸನೆ

ಸಾಧ್ಯವಾದಷ್ಟು ಬೇಗ ತುಕೋಳ್ ಆಯೋಗದ ವರದಿಯ ಬಗ್ಗೆ ಕ್ರಮ ಕೈಗೊಳ್ಳಲಾಗುವುದೆಂದು ಹಣಕಾಸು ಮಂತ್ರಿ ಶ್ರೀ ಬಿ. ರಾಮಕೃಷ್ಣ ಹೆಗ್ಗಡೆ ವಿಧಾನ ಸಭೆಯಲ್ಲಿ ತಿಳಿಸಿದರು.

★

ಮಸೂದೆಗಳ ಮಂಡನೆ

ರಾಜ್ಯಸಭೆ ಮತ್ತು ವಿಧಾನಪರಿಷತ್ತುಗಳಲ್ಲಿ ನಾಮಕರಣ ಸದ್ಯತಿ ನಿಲ್ಲಬೇಕೆಂಬ ಮಸೂದೆ ಲೋಕಸಭೆಯಲ್ಲಿ ಮಂಡಿತವಾಯಿತು.

ಕರ್ನಾಟಕ ವಿಧಾನ ಸಭೆ ಜಾರಿಗೆ ಬರಬೇಕೆಂಬ ಮಸೂದೆ ಲೋಕಸಭೆಯಲ್ಲಿ ಮಂಡಿತವಾಯಿತು.

ಸರ್ಕಾರಿ ಕಾಲೇಜುಗಳಿಲ್ಲ

ಇನ್ನು ಸರ್ಕಾರಿ ಕಾಲೇಜುಗಳನ್ನು ತೆಗೆಯುವ ನೀತಿ ಇಲ್ಲ, ಖಾಸಗಿ ಕಾಲೇಜುಗಳನ್ನು ತೆಗೆಯಲು ಪ್ರೋತ್ಸಾಹ ನೀಡಲಾಗುವದು ಎಂದು ಶಿಕ್ಷಣ ಮಂತ್ರಿ ಶ್ರೀ ಕೆ. ವಿ. ಶಂಕರೇಗೌಡರು ತಿಳಿಸಿದರು.

○

ಯೋಜನೆಗೆ ಹಣ

69-70 ನೇ ಸಾಲಿಗೆ ಮೈಸೂರು ಯೋಜನೆಗೆ ರೂ. 56 ಕೋಟಿ ನಿಗದಿ ಆಗುವ ಸಂಭವವಿದೆ

○

ವಿಧಾನ ಸಭೆಯಲ್ಲಿ ಚರ್ಚೆ

ಬೊಂಬಾಯಿನಲ್ಲಿ ಶಿವಸೇನೆಯ ಚಟುವಟಿಕೆಗಳನ್ನು ಕುರಿತು ಮೈಸೂರು ವಿಧಾನ ಸಭೆ ಚರ್ಚಿಸಲಿದೆ.

★

ಹಸ್ತಕ್ಷೇಪ ಬೇಡ

ಚೀನಾವನ್ನು ಶತ್ರುವೆಂದು ಭಾರತವಾಗಲೀ ಇಂಡೋನೇಷಿಯವಾಗಲೀ ಪರಿಗಣಿಸಿಲ್ಲವೆಂದು, ಆದರೆ ಚೀನಾ ಒಳ ವ್ಯವಹಾರದಲ್ಲಿ ಪ್ರವೇಶಿಸಕೂಡದೆಂದು ಇಂಡೋನೇಷಿಯ ವಿದೇಶಾಂಗ ಮಂತ್ರಿ ಡಾ|| ಆಡಂ ಮುಲಿಕ್ ನನ ದೆಹಲಿಯಲ್ಲಿ ಪತ್ರಕರ್ತರಿಗೆ ತಿಳಿಸಿದರು.

●

ಬೀಟ್ ಸಕ್ಕರೆ

ಮುಂದಿನ ವರ್ಷದ ಆರಂಭದಲ್ಲಿ ಭಾರತದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬೀಟ್ ಸಕ್ಕರೆ ತಯಾರಾಗುವದು.

★ ಸೆಪ್ಟೆಂಬರು 19 ನೇ ತಾ|| ನಡೆದ ಭಾರತ ಸರ್ಕಾರದ ನೌಕರರಿಗೆ ಸಂಬಂಧಿಸಿದಂತೆ ಮುಷ್ಕರ ಹೂಡಿದ ಮೊಕದ್ದಮೆಗಳನ್ನು ಕೈಬಿಡಲು ಭಾರತ ಸರ್ಕಾರ ನಿರ್ಧರಿಸಿದೆ.

ಸ್ಪೀಕರ್‌ಗೆ ಅಭ್ಯರ್ಥಿ

ಕಳೆದ ಪಶ್ಚಿಮ ಬಂಗಾಳ ವಿಧಾನ ಸಭೆಯಲ್ಲಿ ಸ್ಪೀಕರ್ ಆಗಿ ಚರಿತ್ರೆ ಸ್ಥಾಪಿಸಿದ ಶ್ರೀ ಬಿಜಯ ಕುಮಾರ ಬ್ಯಾನರ್ಜಿಯವರನ್ನು ಸ್ಪೀಕರ್ ಸ್ಥಾನಕ್ಕೆ ಉಮೇದುವಾರರನ್ನಾಗಿ ಸಂಯುಕ್ತ ರಂಗ ಸೂಚಿಸಲಿದೆ

ವಿರಾಮ ವೇತನ ಸೂಚನೆ

ದಿವಂಗತ ಅಣ್ಣಾ ದೊರೆಯವರ ಪತ್ನಿ ಶ್ರೀಮತಿ ರಾಣಿ ಅಣ್ಣಾ ದೊರೈರವರಿಗೆ ವಿರಾಮ ವೇತನ ನೀಡಬೇಕೆಂದು ಮದರಾಸು ವಿಧಾನ ಸಭೆಯಲ್ಲಿ ಕಾಂಗ್ರೆಸ್ ನಾಯಕ ಶ್ರೀ ಕರುತಿರುಮನ್ ತಿಳಿಸಿದರು.

ಇಎಂಎಸ್ ಒತ್ತಾಯ

ನವ ದೆಹಲಿಯಲ್ಲಿ ನಿನ್ನೆ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರನ್ನು ಭೇಟಿ ಮಾಡಿದ ಕೇರಳ ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್. ನಂಬೂದರಿ ಪಾದರು, ಬೊಂಬಾಯಿನಲ್ಲಿ ಶಿವಸೇನೆ ಹಾವಳಿಯಿಂದ ನಷ್ಟಕ್ಕೊಳಪಟ್ಟವರಿಗೆಲ್ಲ ಪರಿಹಾರ ನೀಡಬೇಕೆಂದು ಒತ್ತಾಯ ಮಾಡಿದರು.

ನ್ಯಾಯಾಂಗ ವಿಚಾರಣೆ ಆಗಲಿ

ಬೊಂಬಾಯಿನಲ್ಲಿ ಇತ್ತೀಚೆಗೆ ಆದ ಘಟನೆಗಳಿಗೆ ಕಾರಣ ಹುಡುಕಲು ಮತ್ತು ನಿಜವಾದ ಅಪರಾಧಿತರನ್ನು ಪತ್ತೆ ಮಾಡಲು ನ್ಯಾಯಾಂಗ ವಿಚಾರಣೆ ನಡೆಯಬೇಕೆಂದು ಬೆಂಗಳೂರಿನಲ್ಲಿ ನಿನ್ನೆ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸರ್ವ ಸದಸ್ಯರ ಸಭೆಯನ್ನು ಬೆಂಗಳೂರಿನಲ್ಲಿ ನಿನ್ನೆ ಆರಂಭಿಸುತ್ತಾ ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ತಿಳಿಸಿದರು.

★ಬೆಂಗಳೂರಿನಲ್ಲಿ ನಿನ್ನೆ ಸಮಾವೇಶವಾಗಿದ್ದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸರ್ವ ಸದಸ್ಯರ ಸಭೆ, ಶಿವಸೇನೆಯ ನಿಶೇಧವಾಗಬೇಕೆಂಬ ನಿರ್ಣಯ ಅಂಗೀಕರಿಸಿತು.

★ಪಶ್ಚಿಮ ಬಂಗಾಳ ಮಂತ್ರಿಮಂಡಲದಲ್ಲಿ ಮೂವತ್ತೆರಡು ಮಂದಿ ಸದಸ್ಯರಿರುವರು. ನಾಳೆ ಮಧ್ಯಾಹ್ನ 3 ಘಂಟೆಗೆ ಮಂತ್ರಿ ಮಂಡಲ ಪ್ರಮಾಣವಚನ ಸ್ವೀಕರಿಸುವುದು.

ಇದೀಗ

ಮೈಸೂರು ಸರ್ಕಾರದ ರೇಷ್ಮೆನೇಯ್ಗೆ ಕಾರ್ಖಾನೆಯಿಂದ

ಕಣ್ಣು ತಣಿಸುವ ಅಪ್ರತಿಮ ಬಣ್ಣಗಳು

ಮನಮೋಹಕ ನಮೂನೆಯ

ವಿಶಿಷ್ಟ ನಯಗಾರಿಕೆಯ

ಸೀರೆ ಮತ್ತು ವಸ್ತ್ರಗಳು ಹೊರಬಂದಿವೆ.

★

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ,
ಮಾನಂದವಾಡಿ ರಸ್ತೆ, ಮೈಸೂರು-4

ನೀರಿನ ಕ್ಷಾಮ

ಮುಂಗಾರು ಮಳೆ ಹೋದ ಕಾರಣ ನೀಲಗಿರಿ ಜಿಲ್ಲೆಯ ಬಹುಭಾಗ ವಿಷಮ ನೀರು ಅಭಾವಕ್ಕೆ ತುತ್ತಾಗಿದೆ. ವ್ಯವಸಾಯಕ್ಕೆ ಹಾನಿಯುಂಟಾಗಿದೆ.

———

ಹೊಸ ತರಹ ರೋಗ

ನೇಪಾಳದ ಮಾಕ್ವಾನಪುರ ಜಿಲ್ಲೆಯಲ್ಲಿ ವಿನೂತನ ರೋಗ ತಲೆದೋರಿದೆ. ಈ ರೋಗ ರೋಗ ಪೀಡಿತರ ನಾಲಿಗೆಯನ್ನು ಅಚ್ಚ ಕಪ್ಪಾಗಿ ಮಾಡುತ್ತದೆ. ಈ ರೋಗದಿಂದ ಸುಮಾರು ಮೂವತ್ತು ಮಂದಿ ಸತ್ತಿದ್ದಾರೆ.

★

ನಿರ್ಧಾರ ಬದಲಾವಣೆ

ಬುದ್ಧನ ಚಿತ್ರದ ಹಿನ್ನೆಲೆಯಲ್ಲಿ ಗಾಂಧೀಜಿ ಅಂಚೆ ಚೀಟಿ ಹೊರಡಿಸಬೇಕೆಂದಿದ್ದ ತನ್ನ ನಿರ್ಧಾರವನ್ನು ಭಾರತ ಸರ್ಕಾರ ಕೈಬಿಟ್ಟಿದೆ.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H H. the Maharaja of Mysore and ot er personages have exter ded messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah. Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and graeing the occasion with presence, are fervently solicited with grateful thanks.

Editor, 'Satyavadi' Chamarajapuram, Mysore: 4.



Protectthe Cow

ವುಡ್‌ಲ್ಯಾಂಡ್ಸ್ ಜಯಪ್ರದ 3ನೇ ವಾರ

.... ಮನಮೋಹಕ ಹಿಂದಿ ಚಿತ್ರ ....

ದಿವಾನ★DIWANA

ಹಾಸ್ಯತಿಖಾಮಣಿ ರಾಜ್ ಕಪೂರ್, ಸೌಂದರ್ಯರಾಣಿ ಸೈರಾಬಾನು ಅಭಿನಯಿಸಿ ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ– ಶಂಕರ್ ಜೈಕಿಷನ್ ಡೈರೆಕ್ಷನ್– ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಆಪೆರಾ— ಜನವರಿ 5 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

Help The Gorakshana

ಅಶೋಕ ಪಿಜಿನ್‌ಸೀನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಚರ್ಮರೋಗ ಔಷಧಗಳನ್ನೂ ಇಲ್ಲಿ ದೊರೆಯುತ್ತವೆ

Edited, Printed & Published by Dharmaprachara Nirata M S Krishna Rao (Proprietor) at the Satvaad Press Chamarajapuram, Mysoe 4